## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 87 |
| ಸದಸ್ಯರ ಹೆಸರು | ಡಾ: ಚಂದ್ರಶೇಖರ್ ಬಿ.ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದವರು | ಮಾನ್ಯ ಮುಖ್ಯಮಂತ್ರಿಯವರು |
| ಉತ್ತರಿಸಬೇಕಾದ ದಿನಾಂಕ | 16/09/2021 |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಸರ್ಕಾರದ ಇಲಾಖೆಗಳ, ಅಧೀನದ ವ್ಯಾಪ್ತಿಗೆ ಒಳಪಡುವ ಬೋರ್ಡ್, ಕಾರ್ಪೋರೇಷನ್ ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಕಛೇರಿಗಳಲ್ಲಿ ಯಾವ ಗ್ರೇಡ್ ನ ಅಧಿಕಾರಿಗಳು ಪಾವತಿ ಆಧಾರದ ಮೇಲೆ ಯಾವ ಯಾವ ವಾಹನಗಳನ್ನು ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ; (ಆದೇಶದ ಪ್ರತಿಯೊಂದಿಗೆ ಪೂರ್ಣ ವಿವರ ಮಾಹಿತಿ ನೀಡುವುದು) | 1) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 96 ಶಿವಾನೀ 2012, ದಿನಾಂಕ: 23.08.2012<br>ಹಾಗೂ<br>2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 278 ಶಿವಾನೀ 2000, ದಿನಾಂಕ: 18.03.2002 ಗಳ ಪ್ರತಿಗಳನ್ನು ಲಗತ್ತಿಸಿದೆ. |
| ಆ) | ಈ ರೀತಿ ಬಳಸುತ್ತಿರುವ ಸರ್ಕಾರಿ ಮತ್ತು ಪಾವತಿ ಆಧಾರದ ಮೇಲೆ ಪಡೆದಿರುವ ವಾಹನಗಳಿಗೆ ಯಾವ ಯಾವ ಗ್ರೇಡನ ಅಧಿಕಾರಿಗಳಿಗೆ ತೈಲ ಬಳಕೆಯಲ್ಲಿ ಅಥವಾ ಕಿಲೋಮೀಟರ್ ಬಳಕೆಯಲ್ಲಿ ವಿಧಿಸಿರುವ. ಮಾನದಂಡಗಳೇನು? (ಆದೇಶದೊಂದಿಗೆ ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 96 ಶಿವಾನೀ 2012, ದಿನಾಂಕ: 23.08.2012ರನ್ವಯ ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆದಾಗ ತೈಲ ಬಳಕೆ ಅಥವಾ ಕಿಲೋಮೀಟರ್ ಬಳಕೆಯು ಒಳಗೊಂಡಿರುತ್ತದೆ. |
| ಇ) | ಸರ್ಕಾರದ ಆದೇಶದಲ್ಲಿ ನಿಗದಿ ಪಡಿಸಿರುವ ಗ್ರೇಡ್ ಗಿಂತ ಕೆಳಮಟ್ಟದ ಅಧಿಕಾರಿ / ನೌಕರರು ಸರಕಾರಿ ಮತ್ತು ಪಾವತಿ ಆಧಾರದ ಮೇಲೆ ವಾಹನಗಳನ್ನು ಬಳಸುತ್ತಿರುವುದು ನಿಜವೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಈ) | ಸರ್ಕಾರಿ ವಾಹನ ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ತಡೆಗಟ್ಟಿ ಸರ್ಕಾರದ ವೆಚ್ಚ ಉಳಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಅನ್ವಯಿಸುವುದಿಲ್ಲ |

ಸಿಆಸುಇ 120 ಶಿವಾನಿ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಸರ್ಕಾರಿ ಅಧಿಕೃತ ಕೆಲಸಗಳಿಗಾಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಓದಲಾಗಿದೆ:-

1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 278 ಶಿಪಾವಿ 2000, ದಿನಾಂಕ: 18-03-2002.
2. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 139 ಶಿಪಾವಿ 2004, ದಿನಾಂಕ: 12-09-2006.
3. ಪತ್ರ ಸಂಖ್ಯೆ: ಸಾಆ/ರಾಸಾಪ್ರಾ-1ಎ:ಪೀಆರ್-887/2011-12, ದಿನಾಂಕ: 12/19-06-2012.

ಪ್ರಸ್ತಾವನೆ:-

ಸರ್ಕಾರವು ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ, ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗೆ ಖಾಸಗಿ ವಾಹನಗಳನ್ನು ಪಡೆದು ನೀಡುವ ಬಾಡಿಗೆ ದರ ಹಾಗೂ ಕಾಲಮಿತಿಯನ್ನು ಗರಿಷ್ಟ ಮಿತಿಗೊಳಪಡಿಸಿ ನಿಗದಿಪಡಿಸಲಾಗಿತ್ತು. ಕ್ರಮ ಸಂಖ್ಯೆ (2)ರಲ್ಲಿ ಸದರಿ ಉದ್ದೇಶಗಳಿಗಾಗಿ ಇರುವ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ನಿಗದಿಪಡಿಸಲಾಗಿರುತ್ತದೆ.

| | |
|---|---|
| (ಅ) ಮಾಸಿಕ 2500 ಕಿ.ಮೀ. ಅಥವಾ 300 ಗಂಟೆಗಳು | ರೂ.20,000/- |
| (ಆ) 2500 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ | ರೂ.4.00 (ವಿಶೇಷ ಸಂದರ್ಭಗಳಲ್ಲಿ ಮಾತ್ರ) |
| (ಇ) 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.30.00 (ವಿಶೇಷ ಸಂದರ್ಭಗಳಲ್ಲಿ ಮಾತ್ರ) |

ಈ ಮೇಲಿನ ದರಗಳನ್ನು ಪರಿಷ್ಕರಿಸಲು ಸರ್ಕಾರ / ಖಾಸಗಿ ಸಂಸ್ಥೆಗಳಿಂದ ಮನವಿಗಳು ಸ್ವೀಕೃತವಾದವು. ಪ್ರಸ್ತುತ ಇಂಧನ ಹಾಗೂ ಯಂತ್ರೋಪಕರಣಗಳ ಬೆಲೆಯ ಏರಿಕೆಯ ಹಿನ್ನೆಲೆಯಲ್ಲಿ ಕೋರಿಕೆಯನ್ನು ಪರಿಶೀಲಿಸಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು, ಇವರನ್ನು ಕೋರಲಾಯಿತು. ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆಯುಕ್ತರು, ಸಾರಿಗೆ ಇಲಾಖೆ, ಬೆಂಗಳೂರು, ಇವರ ಪತ್ರದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಬಾಡಿಗೆ ದರಗಳನ್ನು ಪರಿಷ್ಕರಿಸಲು ಶಿಫಾರಸ್ಸು ಮಾಡಿದ್ದಾರೆ. ಸರ್ಕಾರವು ಸದರಿ ಶಿಫಾರಸ್ಸುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಶಿಪಾವಿ 2012, ಬೆಂಗಳೂರು, ದಿನಾಂಕ: 23-08-2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆಯಲು ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ನಮೂದಿಸಿದ್ದ ಬಾಡಿಗೆ ದರಗಳನ್ನು ಹಾಗೂ ಕಾಲಮಿತಿಯನ್ನು ಈ ಕೆಳಕಂಡಂತೆ

2 . . . .

ಪರಿಷ್ಕರಿಸಿ ಕೂಡಲೇ ಜಾರಿಗೆ ಬರುವಂತೆ ಆದೇಶಿಸಿದೆ.

| | |
|---|---|
| **ಹವಾ ನಿಯಂತ್ರಣ ರಹಿತ (ನಾನ್ ಎ.ಸಿ.) ವಾಹನಗಳಿಗೆ:-** | |
| (ಅ) ಮಾಸಿಕ 2,500 ಕಿ.ಮೀ. ಅಥವಾ 300 ಗಂಟೆಗಳು | ರೂ.25,000/- |
| (ಆ) 2,500 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ | ರೂ.5.50 |
| (ಇ) 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.40.00 |
| **ಹವಾ ನಿಯಂತ್ರಿತ (ಎ.ಸಿ.) ವಾಹನಗಳಿಗೆ:-** | |
| (ಅ) ಮಾಸಿಕ 2,500 ಕಿ.ಮೀ. ಅಥವಾ 300 ಗಂಟೆಗಳು | ರೂ.30,000/- |
| (ಆ) 2,500 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ | ರೂ.6.50 |
| (ಇ) 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ.55.00 |

ಉಳಿದಂತೆ ವಾಹನ ನೀತಿಗೆ ಸಂಬಂಧಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ಸೂಚನೆಗಳನ್ನು ಹಾಗೂ ಷರತ್ತುಗಳನ್ನು ಪಾಲಿಸತಕ್ಕದ್ದು ಮತ್ತು ಸರ್ಕಾರಿ ಆದೇಶ ಸಂಖ್ಯೆ:-ಸಿಆಸುಇ 278 ಶಿಪಾನೀ 2000, ದಿನಾಂಕ: 18-03-2002ರಲ್ಲಿರುವ ಷರತ್ತುಗಳು ಮುಂದುವರೆಸತಕ್ಕದ್ದು. ಹಾಗೂ ಈ ಪರಿಷ್ಕೃತ ದರಗಳು Prospectively (ಭವಿಷ್ಯವರ್ತಿಯಾಗಿ) ಅನ್ವಯವಾಗತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 689 ವೆಚ್ಚ-12/2012, ದಿನಾಂಕ: 10-08-2012ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

23/8
( ಎಸ್. ನಾಗರಾಜಪ್ಪ )
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಿ. & ಆ.ಸು.ಇಲಾಖೆ (ರಾಜ್ಯ ಶಿಷ್ಟಾಚಾರ).

ಇವರಿಗೆ,-

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, 200 ಪ್ರತಿಗಳನ್ನು ಒದಗಿಸಲು ಕೋರಿದೆ.

ಪ್ರತಿ:-

1. ಮಹಾಲೇಖಪಾಲರು (ಎ ಅಂಡ್ ಇ) / (ಆಡಿಟ್-1) / (ಆಡಿಟ್-2), ಕರ್ನಾಟಕ, ಬೆಂಗಳೂರು-1.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಗಳು.
4. ಎಲ್ಲಾ ಇಲಾಖಾ ಮುಖ್ಯಸ್ಥರು.
5. ಸಾರಿಗೆ ಆಯುಕ್ತರು, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಕಡತ.

CPMG / KA / BG. GPO - 13 / 2002

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ಪತ್ರಿಕೆ

| ಭಾಗ - I | ಬೆಂಗಳೂರು, ಮಂಗಳವಾರ, ಮಾರ್ಚ್ ೧೯, ೨೦೦೨ (ಫಾಲ್ಗುಣ ೨೮ ಶಕ ವರ್ಷ ೧೯೨೩) | ನಂ. ೩೮೮ |
|---|---|---|

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ:- ಸರ್ಕಾರಿ ಅಧಿಕೃತ ಕೆಲಸಗಳಿಗಾಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಬಗ್ಗೆ.

ಉಲ್ಲೇಖ:-1. ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 17 ಜಿಎಸಿ 88, ದಿನಾಂಕ 5-7-1998.

2. ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 319 ಶಿವಾಸೇ 92, ದಿನಾಂಕ 7-12-1992.

3. ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 7 ಶಿವಾಸೇ 2000, ದಿನಾಂಕ 29-8-2000.

**ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 278 ಶಿವಾಸೇ 2000, ಬೆಂಗಳೂರು, ದಿನಾಂಕ 18ನೇ ಮಾರ್ಚ್ 2002**

ಪ್ರಸ್ತಾವನೆ.-

ಸರ್ಕಾರಿ ವಾಹನ ಬಳಕೆಗೆ ಸಂಬಂಧಿಸಿದಂತೆ ಹಾಲಿ ವಿಧಿವಿಧಾನದನ್ವಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ಮಾತ್ರ ನಾಮನಿರ್ದಿಷ್ಟ ವಾಹನವನ್ನು ಹೊಂದಲು ಅರ್ಹರಿರುತ್ತಾರೆ. ಈ ವಾಹನಗಳನ್ನು ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸಿರುವ : ಹೊರಡಿಸುವ ಮಿತವ್ಯಯ ಆದೇಶಗಳಿಗನುಗುಣವಾಗಿ ನೀಡಲಾಗುತ್ತಿದೆ. ಇತ್ತೀಚೆಗೆ ಇಲಾಖೆಗಳಿಂದ ವಾಹನಗಳಿಗಾಗಿ ಬೇಡಿಕೆಗಳು ಹೆಚ್ಚಾಗುತ್ತಿದೆ. ಅಲ್ಲದೆ, ಸರ್ಕಾರವು ಹೊಸ ಹೊಸ ಆಯೋಗಗಳನ್ನು ರಚಿಸುತ್ತಿದ್ದು ಅವುಗಳ ಉಪಯೋಗಕ್ಕಾಗಿ ಸಹ ವಾಹನಗಳನ್ನು ಒದಗಿಸಬೇಕಾಗುತ್ತಿದೆ. ಇದರಿಂದಾಗಿ ಸರ್ಕಾರದಲ್ಲಿ ಹೆಚ್ಚು ಹೆಚ್ಚು ವಾಹನಗಳು, ಅದಕ್ಕನುಗುಣವಾಗಿ ಪೆಟ್ರೋಲ್ : ಇಂಧನ ಹಾಗೂ ದುರಸ್ತಿ, ನಿರ್ವಹಣೆ, ಇತ್ಯಾದಿಗಳಲ್ಲಿ ಗಣನೀಯ ಏರಿಕೆಯುಂಟಾಗಿರುತ್ತದೆ.

ದಿನಾಂಕ 29-11-2000 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಮಾಸಿಕ ಪರಿಶೀಲನಾ ಸಭೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯವನ್ನು ಕೈಗೊಳ್ಳಲಾದೆ.-

"20. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸರ್ಕಾರದ ಉಪಯೋಗಕ್ಕೆ ವಾಹನಗಳನ್ನು ಬಾಡಿಗೆಯ ಮೇರೆಗೆ ಪಡೆಯುವ ವಿಧಾನವು ವಾಹನಗಳನ್ನು ಖರೀದಿಸುವ, ಚಾಲಕರನ್ನು ನೇಮಿಸುವ ಹಾಗೂ ಆಗಿಂದಾಗ್ಗೆ ಭಾರಿ ವೆಚ್ಚದ ವಾಹನ ರಿಪೇರಿಗಳನ್ನು ಮಾಡಿಸುತ್ತಿರುವ ಚಾಲ್ತಿಯಲ್ಲಿರುವ ವಿಧಿವಿಧಾನಗಳಿಗೆ ಒಳ್ಳೆಯ ಪರ್ಯಾಯ ವಿಧಾನವೇ ಎಂಬ ಬಗ್ಗೆ ಪರಿಶೀಲಿಸಲು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದು."

ಮೇಲಿನ ನಿರ್ಣಯದನ್ವಯ ದಿನಾಂಕ 27-10-2000 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೇಲ್ಕಂಡ ವಿಷಯವನ್ನು ಚರ್ಚಿಸಿದ್ದು ಈ ವಿಷಯವನ್ನು ವಾಸ್ತವಿಕ ದೃಷ್ಟಿಕೋನದಿಂದ ಪರಿಶೀಲಿಸುವ ಸಲುವಾಗಿ ಸಂಪೂರ್ಣ ಮಾಹಿತಿಯನ್ನು ಪಡೆದು, ಆರ್ಥಿಕ ಇಲಾಖೆಯ ಅಭಿಪ್ರಾಯವನ್ನು ಪಡೆದು ನಂತರ ಕಾರ್ಯದರ್ಶಿಗಳ ಸಭೆಯಲ್ಲಿ ಪರಿಶೀಲಿಸಬೇಕೆಂದು

ತೀರ್ಮಾನಿಸಲಾಯಿತು. ಅದರನ್ವಯ ಈ ವಿಷಯವನ್ನು ದಿನಾಂಕ 20-8-2001 ರಂದು ನಡೆದ ಕಾರ್ಯದರ್ಶಿಗಳ ಸಭೆಯಲ್ಲಿ ಚರ್ಚಿಸಿ, ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯಬೇಕೆಂದು ತೀರ್ಮಾನಿಸಲಾಯಿತು.

ಮೇಲೆ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರಿ ಇಲಾಖೆಗಳು ವಾಹನಗಳನ್ನು ಖರೀದಿಸುವ ಬದಲು ವಾಹನಗಳನ್ನು ಬಾಡಿಗೆಗೆ ಪಡೆಯುವುದು ಒಳ್ಳೆಯ ಪರ್ಯಾಯ ವಿಧಾನವೆಂದು ಕಂಡು ಬಂದಿರುವುದರಿಂದ ಸರ್ಕಾರವು ಈ ವಿಷಯವನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಸೂಕ್ತ ಪರಿಶೀಲನೆಯ ತರುವಾಯ, ಸರ್ಕಾರಿ ಇಲಾಖೆಗಳು ಹೊಸ ವಾಹನಗಳನ್ನು ಖರೀದಿಸುವುದನ್ನು ನಿಷೇಧಿಸಲಾಗಿದೆ. ಸರ್ಕಾರದ ಇಲಾಖೆಗಳು ಅಧಿಕೃತ ಕೆಲಸ ಕಾರ್ಯಗಳಿಗಾಗಿ ವಾಹನಗಳನ್ನು ಖರೀದಿಸುವ ಬದಲು ಆರ್ಥಿಕ ಇಲಾಖೆಯ ಪೂರ್ವಾನುಮತಿಯನ್ನು ಪಡೆದು ಬಾಡಿಗೆ ಆಧಾರದ ಮೇಲೆ ವಾಹನಗಳನ್ನು ಪಡೆಯಲು ಸರ್ಕಾರವು ಮಂಜೂರಾತಿಯನ್ನು ನೀಡಿದೆ.

ವಾಹನಗಳಿಗೆ ನೀಡುವ ಬಾಡಿಗೆ ಹಾಗೂ ಕಾಲಮಿತಿಯು ಈ ಕೆಳಕಂಡ ಗರಿಷ್ಠ ಮಿತಿಗೊಳಪಟ್ಟಿರುತ್ತದೆ.-

| | |
|---|---|
| ಅ) ಮಾಸಿಕ 2500 ಕಿ.ಮೀ. ಅಥವಾ 300 ಗಂಟೆಗಳು | ರೂ. 15,000-00 |
| ಆ) 2500 ಕಿ.ಮೀ. ನಂತರ ಪ್ರತಿ ಕಿ.ಮೀ. ಗೆ | ರೂ. 3.00 (ವಿಶೇಷ ಸಂದರ್ಭಗಳಲ್ಲಿ ಮಾತ್ರ) |
| ಇ) 300 ಗಂಟೆಗಳ ನಂತರ ಪ್ರತಿ ಗಂಟೆಗೆ | ರೂ. 25.00 (ವಿಶೇಷ ಸಂದರ್ಭಗಳಲ್ಲಿ ಮಾತ್ರ) |

ವಾಹನಗಳನ್ನು ಬಾಡಿಗೆಗೆ ಪಡೆಯುವ ಮುನ್ನ ಸಂಬಂಧಪಟ್ಟ ಟ್ರಾವೆಲ್ ಏಜೆನ್ಸಿ ಹಾಗೂ ಬಾಡಿಗೆ ಪಡೆಯುವ ವಾಹನಗಳ ಬಗ್ಗೆ ಮತ್ತು ದಾಖಲೆಗಳ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಸೂಕ್ತ ಖಾತ್ರಿ ಪಡೆದುಕೊಳ್ಳತಕ್ಕದ್ದು.

ವಾಹನಗಳನ್ನು ಬಾಡಿಗೆಗೆ ಪಡೆಯುವ ಮುನ್ನ ನಿಯಮಾವಳಿಯನ್ವಯ ದರಪಟ್ಟಿಗಳನ್ನು ಪಡೆಯತಕ್ಕದ್ದು ಹಾಗೂ ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ವಾಹನಗಳನ್ನು ರಾಜ್ಯ ಸರ್ಕಾರದ ಎಲ್ಲಾ ಸಾರ್ವಜನಿಕ : ಸ್ವಾಯತ್ತ ಸಂಸ್ಥೆ : ಸ್ಥಳೀಯ ಸಂಸ್ಥೆಗಳು : ನಿಗಮ ಹಾಗೂ ಮಂಡಳಿ ಇತ್ಯಾದಿಗಳಿಗೂ ಸಹ ವಿಸ್ತರಿಸಲಾಗಿದೆ. ಸರ್ಕಾರದ ಕಾರ್ಯದರ್ಶಿಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ನಿಗಮ, ಮಂಡಳಿಗಳು ಇತ್ಯಾದಿಗಳಿಗೆ ಈ ಬಗ್ಗೆ ಸೂಚನೆಗಳನ್ನು ನೀಡುವುದು.

ಉಳಿದಂತೆ ವಾಹನ ನೀತಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ಸೂಚನೆಗಳು ಮುಂದುವರೆಯುತ್ತವೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ ಎಫ್‌ಡಿ 2310 ಅ.2. 2001, ದಿನಾಂಕ 23-1-2002ರಲ್ಲಿ ನೀಡಲಾದ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಸ್. ಗಣಪತಿ
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿ.ಆ.ಸು.ಇ (ರಾಜ್ಯ ಶಿಷ್ಟಾಚಾರ).

ಸರ್ಕಾರಿ ಹೊರವಲಯ ಮುದ್ರಣಾಲಯ, ಬೆಂಗಳೂರು - 560 059.